# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು</u>

## ಸಿ ಸಿ ನಂಃ953/2023

## ಚಾಸಾ-1/ಪ್ರಾಸಾ-1

**ಪ್ರಮಾಣ ವಚನ ಭೋಧಿಸಲಾಯಿತು.** **<u>ದಿನಾಂಕಃ24.09.2024.</u>**

ಹೆಸರು : ಚಂದ್ರಪ್ಪ ತಂದೆ ಕೊಲ್ಲಪ್ಪ
ವಯಸ್ಸು : 60 ವರ್ಷ
ಉದ್ಯೋಗ : ಕಲ್ಲು ಹೊಡೆಯುವ ಕೆಲಸ
ವಿಳಾಸ : ಪಲ್ಲಾಗಟ್ಟೆ ಗ್ರಾಮ, ಜಗಳೂರು ತಾಲೂಕು

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಆರೋಪಿ ನಂಃ1 ನನಗೆ ತಮ್ಮ ಆಗಬೇಕು. ದಿಃ25.01.2023 ರಂದು ಮದ್ಯಾಹ್ನ ಸುಮಾರು 02ಃ00 ಗಂಟೆ ಸಮಯದಲ್ಲಿ ನಮ್ಮ ಕ್ರಷರ್ ನ್ನು ನಾವು ಮೂರು ಜನ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದು, ಅದರಂತೆ ಆರೋಪಿ ನಂಃ1, ನಾನು ಮತ್ತು ನನ್ನ ತಮ್ಮ ಹನುಮಂತಪ್ಪರವರು ಸೇರಿಕೊಂಡು ದೇವೆಂದ್ರಪ್ಪರವರಿಗೆ ಬಾಡಿಗೆಗೆ ಕೊಟ್ಟಿರುತ್ತೇವೆ. ನಮ್ಮ ಹಳೇ ಮಿಷಿನ್ ತೆಗೆದು ಬಾಡಿಗೆದಾರರು ಹೊಸ ಮಿಷಿನ್ ಹಾಕಿರುತ್ತಾರೆ. ನಂತರ ದೇವೆಂದ್ರಪ್ಪರವರು ನಮ್ಮ ಕ್ರಷರ್ ನ್ನು ದಾವಣಗೆರೆಯಲ್ಲಿ ಮಾರಾಟ ಮಾಡಿರುತ್ತಾರೆ. ನಂತರ ದೇವೆಂದ್ರಪ್ಪರವರು ನಮ್ಮ ಕ್ರಷರ್ ಮಿಷಿನ್ ವಾಪಾಸು ನೀಡಿ ಅವರ ಮಿಷಿನ್ ನ್ನು ತೆಗೆದುಕೊಂಡು ಹೋಗುವಂತೆ ನಾನು ತಿಳಿಸಿರುತ್ತೇನೆ. ಆರೋಪಿ ನಂಃ1 ಮತ್ತು ನನ್ನ ತಮ್ಮ ಹನುಮಂತಪ್ಪರವರು ದೇವೆಂದ್ರಪ್ಪರವರ ಜೊತೆ ಮಾತನಾಡಬೇಕು ಎಂದು ಘಟನಾ ಸ್ಥಳಕ್ಕೆ ಕರೆದಿರುತ್ತಾರೆ. ಆರೋಪಿ ನಂಃ1 ಮತ್ತು ನನ್ನ ತಮ್ಮ ಹನುಮಂತಪ್ಪರವರು ನನ್ನ ವಿರುದ್ದ ಗಲಾಟೆ ಮಾಡಿರುತ್ತಾರೆ. ನಾನು ದೇವೆಂದ್ರಪ್ಪರವರ ಮಿಷಿನ್ ವಾಪಾಸು ನೀಡುವುದು ಬೇಡ ಎಂದು ಹೇಳಿದಾಗ ಆರೋಪಿ ನಂಃ1 ರವರು ನನಗೆ ಕಲ್ಲಿನಿಂದ ಮುಖಕ್ಕೆ ಹೊಡೆದಿರುತ್ತಾರೆ. ನನಗೆ ಹಲ್ಲೆಯಿಂದ ಎರಡು ಹಲ್ಲುಗಳು ಹಾನಿಯಾಗಿರುತ್ತವೆ ಹಾಗೂ ತುಟಿಗೆ ಗಾಯವಾಗಿರುತ್ತದೆ.

( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರು ಮುಂದಿನ ಮುಖ್ಯವಿಚಾರಣೆಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ  ಕೇ ಸರಿ ಇದೆ

ಪ್ರ.ದ.ನ್ಯಾ.ದಂ., ಜಗಳೂರು